ಶ್ರೀ ಗುರು ಜಗನ್ನಾಥವಿಠ್ಠಲ ವಿರಚಿತ

# ಶ್ರೀಮದ್ರಾಮಭಜನೆ

## ಬಾಲಕಾಂಡ

ರಾಗ – ಶ್ರೀ ತಾಳ – ಏಕ

ಜಯ ಜಯ ಶ್ರೀರಘುರಾಮ ಜಯ ಜಯ ಸೀತಾರಾಮ ॥ ಪ ॥

ಜಯ ಜಯ ಭಜಕರ ಭಯಕರ ತ್ವತ್ಪದ ದಯದಲಿ ತೋರಿಸೋ–ರಾಮ ॥ಅ.ಪ॥

ಸೂಚನೆ

ದಶರಥನೃಪಸುತ ದಶಕಂಧರ ಮುಖ್ಯ ನಿಶಿಚರಕುಲನಿರ್ಧೂಮ
ಸುರರರ್ಥಿತ ಹರಿ ಧರೆಯೊಳು ತಾನವತರಿಸದರಘುಕುಲರಾಮ ॥ 1 ॥

ದಶರಥನೃಪಸುತ ಶಿಶುಭಾವದಲಿ ವಸುಮತಿ ಮೋಹಿಪ – ರಾಮ ॥ 2 ॥

ಸುಂದರ ಸ್ವಾನನದಿಂದಲಿ ಜನಕಾ ನಂದವ ಬೀರಿದ – ರಾಮ ॥ 3 ॥

ಒಂದಿನ ಮುನಿವರ ಬಂದಾ ನೃಪವರ ಕಂದನ ಪ್ರಾರ್ಥಿಸೆ – ರಾಮ ॥ 4 ॥

ತಂದೆಗೆ ತಾನಭಿವಂದಿಸಿ ಮುನಿಸಹ ನಂದದಿ ನಡೆದನು – ರಾಮ ॥ 5 ॥

ದನುಜರ ಸದೆದಾ ಮುನಿಮಖ ಪೊರೆದ ಇನುಕುಲಸಂಭವ – ರಾಮ ॥ 6 ॥

ಶಿಲೆಯನು ತನ ಪದಜಲಜದಲಿಂದ ಲಲನೆಯ ಮಾಡಿದ – ರಾಮ ॥ 7 ॥

ಇನಿಯನಿಂದಲಾ ನವಿತೆಯಗೂಡಿಸಿ ಮುನಿಸಹ ನಡೆದನು ರಾಮ ॥ 8 ॥

ಜನಕನ ಪುರವನು ಅನುಜನ ಸಹಿತದಿ ಮುನಿಯೊಡನೈದಿದ – ರಾಮ ॥ 9 ॥

ನರವರಸಭೆಯಲಿ ಗಿರಿಶನ ಧನುವನು ಮುರಿದನು ರಾಘವ – ರಾಮ ॥ 10 ॥

ಕ್ಷೋಣೀಶನ ಪಣ ಕ್ಷೀಣಿಸಿ ಸೀತೆಯ ಪಾಣಿಯ ಪಿಡಿದನು – ರಾಮ ॥ 11 ॥

ಸುದತಿಯು ನೀಡಿದ ಪದುಮದ ಮಾಲೆಯ ಮುದದಲಿ ಧರಿಸಿದ – ರಾಮ ॥12॥

ಜಾನಕಿ ಸೊಗಸಿನ ಆನನಕಮಲಕೆ ಭಾನುಮನಾದನು – ರಾಮ ॥ 13 ॥

ಮಾರ್ಗಮಧ್ಯದಿ ಭಾರ್ಗವ ಬರಲು ಮಾರ್ಗಣ ಎಸೆದನು – ರಾಮ ॥ 14 ॥

ಲಕ್ಷಣಸತಿಯುತ ಲಕ್ಷ್ಮಣ ಸಹಿತದಿ ತಕ್ಷಣ ನಡೆದನು – ರಾಮ ॥ 15 ॥

ಸೀತೆಯ ಸಹ ಸಾಕೇತದ ಜನರಿಗೆ ಪ್ರೀತಿಯಗೊಳಿಸಿದ – ರಾಮ ॥ 16 ॥

## ಅಯೋಧ್ಯಾಕಾಂಡ

ಸುತನಿಗೆ ಪಟ್ಟದ ಯತನಕೆ ವಿಘ್ನವ ಸತಿಯಳು ಮಾಡಲು – ರಾಮ॥ 17 ॥

ಧೃರಿತನ ಪಟ್ಟವ ಭರತೆಗೆ ನೇಮಿಸಿ ತ್ವರದಲಿ ನಡೆದನು – ರಾಮ ॥ 18 ॥

## ಅರಣ್ಯಕಾಂಡ

ನಾರಿನ ಮಡಿಯನು ಚಾರದಲುಟ್ಟು ಸಾಗಿದ ವನದಲಿ – ರಾಮ ॥ 19 ॥

ಸಾನುಜ ರಘುವರ ಮಾನಿನಿ ಸಹಿತ ಕಾನನ ಚರಿಸಿದ – ರಾಮ ॥ 20 ॥

ಅನುಜನ ಕೈಯಲಿ ದನುಜೆಯ ನಾಸಿಕ ಹನನವ ಹೈಸಿದ – ರಾಮ ॥ 21 ॥

ಖರಮುಖದನುಜರ ತರಿದಾ ರಘುವರ ಚರಿಸಿದ ವನವನ – ರಾಮ ॥ 22 ॥

ಪಂಚವಟಿಯಲಿ ಚಂಚಲನೇತ್ರೆಯ ವಂಚಿಪ ಮೃಗ ಬರೆ – ರಾಮ ॥ 23 ॥

ರಾಣಿಯು ಬೇಡಲು ಬಾಣದಿ ಸದೆದು ಕ್ಷೋಣಿಗೆ ಕೆಡಹಿದ – ರಾಮ ॥ 24 ॥

ದೀನಧ್ವನಿಯನು ಮಾನಿನಿ ಕೇಳಿ ಹೀನೋಕ್ತಿಯ ನುಡಿಯಲು – ರಾಮ ॥ 25 ॥

ಸೀತೆಯ ವಚನದಿ ಕಾತರ ಮನದಿಂ ದಾತನು ನಡೆದನು – ರಾಮ ॥ 26 ॥

ರಾಕ್ಷಸರಾವಣ ವೀಕ್ಷಿಸಿ ಸೀತೆಯ ನಾಕ್ಷಣ ವೈದನು – ರಾಮ ॥ 27 ॥

ಲೋಕಜನನಿಯಾಶೋಕವನದಲಿ ಶೋಕದಲಿಟ್ಟನು – ರಾಮ ॥ 28 ॥

ತರಣಿಕುಲೋದ್ಭವ ಪರಣಶಾಲೆಯೊಳು ತರುಣಿಯ ಕಾಣದೆ–ರಾಮ ॥ 29 ॥

ಪೊಡವಿತನಯಳ ಪುಡುಕುವ ನೆವದಿ ಅಡವಿಯ ಚರಸಿದ – ರಾಮ ॥ 30 ॥

ಕಂಜಮುಖಿಯಳ ಕುಂಜದಿ ಪುಡುಕಿದ ಕಂಜಲೋಚನ – ರಾಮ ॥ 31 ॥

ಮಾಯದ ಸೀತಾಕಾಯದ ಸುದ್ದಿ ಜಟಾಯು ಪೇಳಿದ – ರಾಮ ॥ 32 ॥

ಪಕ್ಷಗಳಿಲ್ಲದ ಪಕ್ಷಿಯ ಮುಖದಿ ಸ ಲಕ್ಷಣ ಕೇಳಿದ – ರಾಮ ॥ 33 ॥

ಅರಸುತ ಬರುತಿರೆ ಗಿರಿಯಲಿ ಅಂಜನೆ ತರುಳನ ಕಂಡನು – ರಾಮ ॥ 34 ॥

ಮರುತನು ರಾಮನ ಶಿರಸದಿ ನಮಿಸಿ ಕರಯುಗ ಮುಗಿದನು – ರಾಮ ॥ 35 ॥

ಅನುಪಮ ಕರುಣದಿ ಹನುಮನ ಗ್ರಹಿಸಿದ ಇನಕುಲಸಂಭವ – ರಾಮ ॥ 36 ॥

## ಕಿಷ್ಕಿಂಧಾಕಾಂಡ

ದೇವಿಯ ನೆವ ಸುಗ್ರೀವನ ಸಖ್ಯವ ತಾ ವಹಿಸಿದನು – ರಾಮ ॥ 37 ॥

ಶೀಲ ಬಹುಬಲಶಾಲಿ ಎನಿಸಿಹ ವಾಲಿಯ ಕೊಂದನು – ರಾಮ ॥ 38 ॥

ಥಟ್ಟನೆ ರವಿಜಗೆ ಪಟ್ಟವ ಗಟ್ಟೀ ಧಿಟ್ಟ ಕಪಿಗಳ ನೆರಹಿದ – ರಾಮ ॥ 39 ॥

ದ್ವಿಪಗಂಧ್ವರದ ಕಪಿಗಳ ಕರೆಸಿ ವಿಪಿನಕೆ ಕಳಿಸಿದ – ರಾಮ ॥ 40 ॥

ಕಾನನದಲಿ ತಾವು ಜಾನಕಿ ಕಾಣದೆ ಧ್ಯಾನದಿ ಕುಳಿತರು – ರಾಮ ॥ 41 ॥

## ಸುಂದರಕಾಂಡ

ವನಿತೆಯ ಗೋಸುಗ ಹನುಮನು ವೇಗದಿ ವನಧಿಯ ದಾಟಿದ – ರಾಮ ॥ 42 ॥

ಬಿಂಕದಿ ಹನುಮನು ಲಂಕೆಯ ಪೊಕ್ಕು ಮಂಕುದನುಜರ – ರಾಮ ॥ 43 ॥

ವನಗಿರಿ ದುರ್ಗದಿ ವನಜಾಕ್ಷಿಯನು ಮನದಣಿ ಪುಡಿಕಿದ – ರಾಮ ॥ 44 ॥

ಧಾರುಣಿ ತನಯಳ ಸಾರುವೆನೆನುತ ಊರಲಿ ಪುಡುಕಿದ – ರಾಮ ॥ 45 ॥

ಓಣಿಗಳೊಳು ತಾ ಕ್ಷೋಣಿತನಯಳಾ ಕಾಣದೆ ತಿರುಗಿ – ರಾಮ ॥ 46 ॥

ಲೋಕದ ಮಾತೆಯಾ ಶೋಕವನದೊಳಾ ಲೋಕನಗೈದನು – ರಾಮ ॥ 47 ॥

ಕಾಮಿನಿಮಣಿಗೆ ರಾಮನ ವಾರ್ತೆಯ ಪ್ರೇಮದಿ ಪೇಳಿದ – ರಾಮ ॥ 48 ॥

ರಾಮನ ಶುಭಕರನಾಮದ ವಾರ್ತೆಯ ಪ್ರೇಮದಿ ಪೇಳಿದ – ರಾಮ ॥ 49 ॥

ರಾಮನ ಶುಭತಮನಾಮದ ಮುದ್ರಿಕೆ ಪ್ರೇಮದಿ ನೀಡಿದ – ರಾಮ ॥ 50 ॥

ರೂಢಿಜದೇವಿಯ ಚೂಡಾಮಣಿಯ ನೀಡುವೆನೆಂದನು – ರಾಮ ॥ 51 ॥

ಕುಶಲದ ವಾರ್ತೆಯ ಶಶಿಮುಖಿ ಕೇಳಿ ವ್ಯಸನದಿ ನುಡಿದಳು – ರಾಮ ॥ 52 ॥

ಕೋತಿಯೆ ಇಲ್ಲಿಗೆ ಯಾತಕೆ ಬಂದೆಯೊ ಘಾತಿಪರಸುರರು ರಾಮ ॥ 53 ॥

ಬಲಹೀನನು ನೀ ಬಲವಂತಸುರರು ಛಲಮಾಡದೆ ನಡಿ – ರಾಮ ॥ 54 ॥

ಘನತರ ಲಂಕೆಗೆ ವನಚರ ಬಂದೆಯೊ ದನುಜರು ಕೊಲ್ವರು ರಾಮ ॥ 55 ॥

ರಾಕ್ಷಸ ಗಣ ತಾ ವೀಕ್ಷಿಸಿ ನಿನ್ನನು ಶಿಕ್ಷೆಯ ಗೈವುದು – ರಾಮ ॥ 56 ॥

ಮಾತೆಯ ತಿಳಿ ಎನಗ್ಯಾತರ ಭಯ ರಘು ನಾಥನು ಕಾಯುವ – ರಾಮ ॥57॥

ಅಖಿಣಾಶ್ಮ ನಾ ರಾಮನ ದಯದಲಿ ನೀ ಕರುಣಿಸು ತಾಯೆ – ರಾಮ ॥ 58 ॥

ಮರುತಾತ್ಮಜ ತಾ ಭರದಲಿ ನಡೆದು ತರುಗಳ ಕಿತ್ತಿದ – ರಾಮ ॥ 59 ॥

ಅಶೋಕವನದ ಸಶೋಕವಾರ್ತೆಯ ನಿಶಿಜರ ಕೇಳಿದ – ರಾಮ ॥ 60 ॥

ಕೋತಿಯು ಹಿಡಿಯಲು ಕಾತುರದಿಂದಲಿ ದೂತರ ಕಳುಹಿದ – ರಾಮ ॥ 61॥

ಲಕ್ಷ್ಯ ಮಾಡದೆ ತಕ್ಷಣ ಕೋತಿಯ ಶಿಕ್ಷಿಪೆನೆನುತಲಿ – ರಾಮ ॥ 62 ॥

ಬಂದಾ ರಾವಣಕಂದನ ನೋಡಿ ನಂದದಿ ನಲಿದನು - ರಾಮ ॥ 63 ॥

ಅಕ್ಷಕುಮಾರನ ಲಕ್ಷಿಯ ಮಾಡದೆ ತಕ್ಷಣ ಕೊಂದನು - ರಾಮ ॥ 64 ॥

ಯುದ್ಧದಲತಿ ಸನ್ನದ್ಧರಾದ ಪ್ರಸಿದ್ಧ ದಿತಿಜರು - ರಾಮ ॥ 65 ॥

ಶಕ್ತಿಯು ಸಾಲದಶಕ್ತರಾಗಿ ಬಹು ಯುಕ್ತಿಯ ಮಾಡ್ದರು - ರಾಮ ॥ 66 ॥

ಇಂದ್ರಾರಾತಿಯು ನಂದದಿ ಬಂದು ನಿಂದನು ರಣದಲಿ - ರಾಮ ॥ 67 ॥

ಬೊಮ್ಮನಸ್ತ್ರವ ಘಮ್ಮನೆ ಹಾಕಲು ಸುಮ್ಮನೆ ಸಿಕ್ಕನು - ರಾಮ ॥ 68 ॥

ಮಾತೆಯಕಂಡಾರಾತಿಯ ಪುರವರ ನಾಥನ ಕಂಡನು - ರಾಮ ॥ 69 ॥

ಮೂರ್ಖಾಗ್ರಣಿ ಕೇಳ್ ಲೇಖಾಗ್ರಣಿ ಶಿರಿ ಕಾರುತ್ಸ್ಥಾನ್ವಯ - ರಾಮ ॥ 70 ॥

ರಾಮನ ಪದಯುಗತಾಮರಸಕೆ ನಾ ಪ್ರೇಮದ ಭಕ್ತನು - ರಾಮ ॥ 71 ॥

ಶ್ರೀನಿಧಿರಾಮನ ಮಾನಿನಿತಸ್ಕರ ದಾನವ ಕೇಳೆಲೋ - ರಾಮ ॥ 72 ॥

ದುಷ್ಟನೆ ತಿಳಿ ನೀ ಸೃಷ್ಟಿಯೆ ಮೊದಲಾ ದಷ್ಟಕಕರ್ತನು - ರಾಮ ॥ 73 ॥

ಭ್ರಷ್ಟರಾವಣ ಸುರಶ್ರೇಷ್ಠನ ವೈರದಿ ನಷ್ಟನು ನೀನಾಗುವಿ - ರಾಮ ॥ 74 ॥

ಜಾನಕಿರಮಣನು ಮಾನವನಲ್ಲವೊ ದಾನವಾಂತಕನು - ರಾಮ ॥ 75 ॥

ಬಲವದ್ವೇಷವು ಸುಲಭಲ್ಲವೊ ತವ ಕುಲನಾಶಾಗೊದೊ - ರಾಮ ॥ 76 ॥

ಕಾನನಕೋತಿಯೆ ಏನಾಡಿದಿ ನುಡಿ ಹಾನಿಯ ಮಾಡುವೆ - ರಾಮ ॥ 77 ॥

ಆ ಕ್ಷಣ ರಾವಣ ರಾಕ್ಷಸ ಜನರಿಗೆ ಶಿಕ್ಷಿಸಿರೆಂದನು - ರಾಮ ॥ 78 ॥

ಕೋತಿಯ ಕೊಂದರೆ ಪಾತಕ ಬಪ್ಪೊದು ಘಾತವು ಸಲ್ಲದು - ರಾಮ ॥ 79 ॥

ತರುವರನೇರಿದ ವಾನರಬಾಲದಿ ತರುವೈರಿಯನಿಟ್ಟರು - ರಾಮ ॥ 80 ॥

ಹರಿವರ ತಾನೇ ಉರಿಯಲಿ ಲಂಕಾ ಪುರವನು ದಹಿಸಿದ - ರಾಮ ॥ 81 ॥

ವಾನರನಾಥನು ಕಾನನ ಸುರವರ ರಾನನಕಿತ್ತನು - ರಾಮ ॥ 82 ॥

ದಿತಿಜತತಿಯನು ಹತಗೈದಾ ಕಪಿ ನತಿಸಿದ ಸೀತೆಗೆ - ರಾಮ ॥ 83 ॥

ಸಾಗರಲಂಘಿಸಿ ವೇಗದಿ ಬಂದು ಬಾಗಿದ ಸ್ವಾಮಿಗೆ - ರಾಮ ॥ 84 ॥

ರಾಮನ ಪದಕೆ ಪ್ರೇಮದಿ ನಮಿಸಿ ಕ್ಷೇಮವ ತಿಳಿಸಿದ - ರಾಮ ॥ 85 ॥

ಕಾಮಿನಿಕೊಟ್ಟಹ ಹೇಮದ ರಾಗಟಿ ಸ್ವಾಮಿಗೆ ನೀಡಿದ - ರಾಮ ॥ 86 ॥

## ಯುದ್ಧಕಾಂಡ

ಉಗ್ರಮನದ ಸುಗ್ರೀವ ಕಪಿಗಳ ನಿಗ್ರಹಗೈಸಿದ – ರಾಮ ॥ 87 ॥

ಗಿರಿತರುಗಳ ತಾ ತ್ವರದಲಿ ತರಿಸಿ ಶರಧಿಯ ಕಟ್ಟಿದ – ರಾಮ ॥ 88 ॥

ಸೀತೆಯ ಗೋಸುಗ ಸೇತುಮಾರ್ಗದಿ ರಘು ನಾಥನು ನಡೆದನು – ರಾಮ ॥89॥

ವಾನರನಾಯಕ ಸೇನೆಯ ಸಹಿತದಿ ತಾನು ನಡೆದನು – ರಾಮ ॥ 90 ॥

ದಶಮುಖನಗರಿಯ ವಶದಲಿ ಮಾಡಿದ ನಸಮಮಹಿಮನು – ರಾಮ ॥ 91 ॥

ಕಾಮಿನಿ ನೆವದಲಿ ರಾಮ ದನುಜರಿಗೆ ಆಮಹಯುದ್ಧವು – ರಾಮ ॥ 92 ॥

ಪಾವಿನ ಬಾಣದಿ ರಾವಣಿ ಲಕ್ಷ್ಮಣ ಜೀವನ ಕಳೆಯಲು – ರಾಮ ॥ 93 ॥

ಪಾವನಿ ತಾ ಸಂಜೀವನಪರ್ವತ ತೀವ್ರದಿ ತಂದನು – ರಾಮ ॥ 94 ॥

ಸೇವಕಹನುಮನು ದೇವನ ತಮ್ಮಗೆ ಜೀವನವಿತ್ತನು – ರಾಮ ॥ 95 ॥

ತಂದೆಯ ಪುರದಲಿ ಇಂದ್ರನ ವೈರಿಯ ಕೊಂದನು ಲಕ್ಷ್ಮಣ – ರಾಮ ॥ 96 ॥

ಮೂಲ ಬಲವನು ಲೀಲೆಯಿಂದ ನಿರ್ಮೂಲವ ಗೈಸಿದ – ರಾಮ ॥ 97 ॥

ಅಂಬುಧಿತೆರ ತಾ ಸಂಭ್ರಮಸೈನ್ಯ ಕ ದಂಬವ ನೋಡಿದ – ರಾಮ ॥ 98 ॥

ಅಂಬುಗಳೆಸೆದಾ ಕುಂಭಕರ್ಣನಾ ಕುಂಭಿಣಿಗಿಳಿಸಿದ – ರಾಮ ॥ 99 ॥

ಕರೆಸಲು ದಿತಿಜನು ಶರವೃಷ್ಟಿಯ ತಾ ಸುರಸಿದ ರಣದಲಿ – ರಾಮ ॥ 100 ॥

ರಾವಣನುಜರ ಜೀವನ ಕಳೆದನು ದೇವಶಿಖಾಮಣಿ – ರಾಮ ॥ 101 ॥

ರಾಕ್ಷಸವರ್ಯನ ವಕ್ಷೋದಾರಣ ವಾಕ್ಷಣ ಗೈಸಿದ – ರಾಮ ॥ 102 ॥

ಗುಣಯುತ ವಿಭೀಷಣನಿಗೆ ಪಟ್ಟವ ಕ್ಷಣದಲಿ ಕಟ್ಟಿದ – ರಾಮ ॥ 103 ॥

ಸತಿ ನಿಜ ಅನುಜಾಮಿತಮರ್ಕಟವರ ತತಿಸಹ ಹೊರಟನು – ರಾಮ ॥ 104 ॥

ಬಿಸಜಾಂಬಕ ತಾ ಕುಸುಮದ ರಥವನು ಕುಶಲದಲೇರಿದ – ರಾಮ ॥ 105 ॥

ಮಂದಗಮನಿ ಸಹ ನಂದಿಗ್ರಾಮಕೆ ನಂದದಿ ಬಂದನು – ರಾಮ ॥ 106 ॥

ಭರತನ ಸಹಿತದಿ ಪುರವನು ಸಾರಿದ ಸರಸಗುಣಾರ್ಣವ – ರಾಮ ॥ 107 ॥

ತಂದೆಯ ತ್ವರ ಪುರಂದರಲೋಕದ ಲಿಂದ ಕರೆಸಿದ – ರಾಮ ॥ 108 ॥

ಶಿಷ್ಟರೆನಿಪ ವಸಿಷ್ಠ ದ್ವಿಜಕುಲ ಶ್ರೇಷ್ಠರ ಕರೆಸಿದ – ರಾಮ ॥ 109 ॥

ಶುಭದಿನದಲಿ ಮಹವಿಭವ ಪೂರ್ವಕ ಸಭೆಯನು ಸಾರಿದ – ರಾಮ ॥ 110 ॥

ಸ್ವಸ್ತಿವಾಚನ ತಾ ಸ್ವಸ್ಥ ಮನದಿ ಪ್ರಾಶಸ್ತವಗೈಸಿದ – ರಾಮ ॥ 111 ॥
ವಿಪ್ರರ ಭೋಜನ ಕ್ಷಿಪ್ರದಿ ಗೈಸಿದ ನಪ್ರತಿ ಪುರಷನು – ರಾಮ ॥ 112 ॥
ರೂಢಿಯೆ ಮೊದಲಾಷೋಡಶ ದಾನವ ನೀಡಿದ ದ್ವಿಜರಿಗೆ – ರಾಮ ॥ 113 ॥
ರಾಮನು ಸಾರ್ವಭೌಮನಾಗಿ ಈ ಭೂಮಿಯನಾಳಿದ – ರಾಮ ॥ 114 ॥
ರಮೆಯಿಂದಲಿ ತಾ ರಮಿಸಿದ ಸೀತಾ ರಮಣನು ರಘುಕುಲ – ರಾಮ ॥ 115 ॥
ದಶರಥಸುತ ತ್ರಿದಶರಿಂದಲಿ ಈ ವಸುಧೆಯ ಪೊರೆದನು – ರಾಮ ॥ 116 ॥
ಅಂಜನಿ ತನಯಗೆ ಕಂಜಜಪಟ್ಟವ ರಂಜಿಸಿ ನೀಡಿದ – ರಾಮ ॥ 117 ॥
ರಾಜ ರಾಜ ರಾಜೀವನಯನ ತನ ಭೋಜನ ನೀಡಿದ – ರಾಮ ॥ 118 ॥
ಕಂಜಾಕ್ಷನ ಪದಕಂಜಭಜಕ ಪ್ರಾ ಭಂಜನಸುತ ಕಪಿ – ರಾಮ ॥ 119 ॥
ಚಂಪಕ ತರುಲತ ಕಂಪಿತ ಶುಭತರ ಕಿಂಪುರುಷ್ಯೈದಿದ – ರಾಮ ॥ 120 ॥
ಮೋಕ್ಷದ ಸುಖವಾಪೇಕ್ಷಿಪ ಜನರನು ವೀಕ್ಷಿಸಿ ಕರೆದನು – ರಾಮ ॥ 121 ॥
ತನ್ನಲಿ ಭಕುತಿಯ ಚನ್ನಾಗಿ ಪಾಲಿಸಿ ಮನ್ನಿಸಿ ಪೊರೆದನು – ರಾಮ ॥ 122 ॥
ದುಷ್ಟರ ನಿಗ್ರಹ ಶಿಷ್ಟರ ಪಾಲಕಾ ನಿಷ್ಟವ ಕಳೆದನು – ರಾಮ ॥ 123 ॥
ಸಾನುಜಸತಿಸಹ ಜ್ಞಾನಮಯ ಬಹು ಮಾನದಿ ಪೊರೆದನು – ರಾಮ ॥ 124 ॥
ಕ್ಷುದ್ರರು ಮಾಳ್ಪೋಪದ್ರವ ಕಳೆದು ಭದ್ರವ ನೀಡಿದ – ರಾಮ ॥ 125 ॥
ಮೋದವೆ ದಕ್ಷ ಪ್ರಮೋದೋತ್ತರ ನಿಜ ಮೋದಾವಯವನು – ರಾಮ ॥ 126 ॥
ಪೂರ್ಣರೂಪ ತಾ ಪೂರ್ಣಗುಣಾರ್ಣವ ಪೂರ್ಣನೆನಿಸಿದ – ರಾಮ ॥127॥

**ಫಲಶ್ರುತಿ**

ರಾಮನ ಭಜನೆಯ ನೇಮದಿ ಮಾಡಲು ಕಾಮಿತ ನೀಡುವ – ರಾಮ ॥ 128 ॥
ಅರ್ಗಳವಾಗಿಹ ದುರ್ಗೋಪದ್ರ ಸಂ ಸರ್ಗವ ಕಳೆದನು – ರಾಮ ॥ 129 ॥
ದೂತಜನರಗತಿದಾತನು **ಗುರುಜಗನ್ನಾಥವಿಠಲನು** – ರಾಮ ॥ 130 ॥

**॥ ಸಮಸ್ತ ಗುರ್ವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಕೃಷ್ಣಾರ್ಪಣಮಸ್ತು ॥**

anand printers, hyd. 9848577673